

# ಐರ್ಲೆಂಡಿನ ಐಸಿರಿ

**ದಾರಿಯುದ್ದಕ್ಕೂ ಹಸಿರು ಸೌಂದರ್ಯ ತುಂಬಿ ತುಳುಕುವ ದೇಶ ಐರ್ಲೆಂಡ್. ವಿಕ್ಲೋ ಪರ್ವತ ರಾಷ್ಟ್ರೀಯ ಉದ್ಯಾನವನವಂತೂ ಕಾಡು, ಪರ್ವತದ ನಡುವಣ ಚಾರಣ ಬಯಸುವವರಿಗೆ ಮುದ ನೀಡುವ ತಾಣ.**

ಚಿತ್ರ– ಲೇಖನ: **ಸಿ. ಸಿದ್ದರಾಜು ಆಲಕೆರೆ**

ಐರ್ಲೆಂಡ್ ದೇಶದುದ್ದಕ್ಕೂ ಎದ್ದು ಕಾಣುವುದು ಪ್ರಕೃತಿ ಸೌಂದರ್ಯ. ವಾಯುವ್ಯ ಯೂರೋಪ್‌ನಲ್ಲಿರುವ ಈ ದ್ವೀಪ ದೇಶವನ್ನು ನೋಡುವುದು ಕಣ್ಣಿಗೆ ಹಬ್ಬ. ಮಗಳು ಮತ್ತು ಅಳಿಯನ ಆಹ್ವಾನದ ಮೇರೆಗೆ ಐರ್ಲೆಂಡಿಗೆ ತೆರಳಿದ್ದ ನನಗೆ, ಅಲ್ಲಿನ ಅತಿದೊಡ್ಡ ರಾಷ್ಟ್ರೀಯ ಉದ್ಯಾನವನ ನೋಡುವ ಸದವಕಾಶ ಸಿಕ್ಕಿತು.

ಸಮುದ್ರ ಪಕ್ಕದಲ್ಲೇ ಇರುವ ರಾಜಧಾನಿ ನಗರ ಡಬ್ಲಿನ್. ಅದೂ ಒಂದು ದ್ವೀಪ. ಅದರ ಮತ್ತೊಂದು ತೀರವೇ ಗಾಲ್ವೆ. ಗಾಲ್ವೆ ನಗರದವರೆಗೆ ಹೆದ್ದಾರಿಯಲ್ಲಿ, ಸಮುದ್ರದಲ್ಲಿ ನೀರು ಕಾಣುವಂತೆಯೇ ಅಕ್ಕಪಕ್ಕದ ಜಮೀನಿನಲ್ಲಿ ಹಸಿರು ಹುಲ್ಲುಗಾವಲು ಗೋಚರಿಸುತ್ತದೆ. ಆರು ರಾಷ್ಟ್ರೀಯ ಉದ್ಯಾನವನಗಳಿವೆ. ಅವುಗಳಲ್ಲಿ ವಿಕ್ಲೋ ಪರ್ವತ ರಾಷ್ಟ್ರೀಯ ಉದ್ಯಾನವನ (ವಿಕ್ಲೋ ಮೌಂಟೆನ್ಸ್ ನ್ಯಾಷನಲ್ ಪಾರ್ಕ್) ಅತಿ ದೊಡ್ಡದು. ಐರ್ಲೆಂಡ್‌ನಲ್ಲೇ ಇದು ಜನಪ್ರಿಯ.

2002ರಲ್ಲಿ 17 ಸಾವಿರ ಹೆಕ್ಟೇರ್ ಭೂಪ್ರದೇಶ ಹೊಂದಿದ್ದ ಈ ರಾಷ್ಟ್ರೀಯ ಉದ್ಯಾನವನ ಈಗ, 20,483 ಹೆಕ್ಟೇರ್ ಪ್ರದೇಶದವರೆಗೆ ವಿಸ್ತರಿಸಿದೆ. ವಿಕ್ಲೋ ಪರ್ವತ ರಾಷ್ಟ್ರೀಯ ಉದ್ಯಾನವನದ ಬಹುತೇಕ ಪ್ರದೇಶ ಅರಣ್ಯವೇ. ಅಲ್ಲಿನ ಗಿರಿ ಶಿಖರಗಳು, ಜಲಪಾತ, ಹೃದಯ ಭಾಗದಲ್ಲಿರುವ ಉದ್ಯಾನವನ ಮತ್ತು ಸರೋವರಗಳು ನಯನ ಮನೋಹರ.

ವೈವಿಧ್ಯಮಯ ಪ್ರಾಣಿ ಸಂಪತ್ತಿನ ಆಗರ ಈ ಕಾಡು. ಔಷಧಿ ಗುಣವುಳ್ಳ ಗಿಡಮೂಲಿಕೆಗಳೂ ಇವೆ. ಓಕ್ ಮರಗಳಲ್ಲೂ ಹತ್ತಾರು ವಿಧದ ತಳಿಗಳು ಇಲ್ಲಿವೆ. ಬಿಳಿ ಓಕ್ ಮರವನ್ನು 'ಐರೀಸ್' ಎಂದೇ ಕರೆಯಲಾಗುತ್ತಿತ್ತು. ಈಗ ಅದನ್ನು 'ಡೆರ್‍ರೀಬಾನ್' ಎಂದು ಕರೆಯಲಾಗುತ್ತಿದೆ. ಈ ಓಕ್ ದೀರ್ಘ ಬಾಳಿಕೆಯ ಮರವಾಗಿದ್ದು ಮನೆಗಳನ್ನು ನಿರ್ಮಿಸಲು ಅತ್ಯುಪಯುಕ್ತ. ಈ ಮರದಿಂದಲೇ ಇಲ್ಲಿನ ಭಾಷೆಯ ಐರೀಸ್ ಹೆಸರು ಬಂದಿರಬಹುದು ಎಂದು ಊಹಿಸಲಾಗಿದೆ.

ಓಕ್ ಗಾಲ್ಸ್‌ನಿಂದ ಕಪ್ಪು ಶಾಯಿಯನ್ನು ತಯಾರಿಸಲಾಗುತ್ತಿತ್ತು. ಐದು